(ಇಂದು ದಿನಾಂಕ 13-12-2022 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು - 1, 2, 6 ರಿಂದ 9, 10, 22, 25 ರಿಂದ 32 ರಿಂದ 41 ನೇ ಪ್ರತಿವಾದಿಯರ ಪರ ಶ್ರೀ ಜಿ.ಜಿ.ಜಿ. ವಕೀಲರಿಂದ-**

ನನ್ನ ವಾಸದ ಹಳೆ ಮನೆ ದಾವಾ ಸ್ವತ್ತಿನ ದಕ್ಷಿಣ ದಿಕ್ಕಿಗೆ ಇದೆ. ದಾವಾ ಸ್ವತ್ತಿನ ಮಧ್ಯದಲ್ಲಿ ಹೆಗಡೆ ಗ್ರಾಮದಿಂದ ಕಲಕೋಡ ಮಜರೆಗೆ ಹೋಗುವ ಒಂದು ಪಂಚಾಯತ್ ರಸ್ತೆ ಇದೆ ಎಂದರೆ ಸರಿ. ಸದರಿ ಪಂಚಾಯತ್ ರಸ್ತೆಯು ನಾನು ದಾವಾಸ್ತಿ ಖರೀದಿಸುವ ಮೊದಲಿನಿಂದಲೂ ಇದೆ. ನನ್ನ ಹೊಸ ಮನೆಯು ಹಳೆ ಮನೆಗಿಂತ 25 ಪೂಟ್ ಅಂತರ ಇದೆ ಮತ್ತು ಹಳೆ ಮನೆಯು ಪಂಚಾಯತ್ ರಸ್ತೆಯಿಂದ 6 ಪೂಟ್ ಎತ್ತರದಲ್ಲಿದೆ. ಹಳೆ ಮನೆಯಿಂದ ಕಲಕೋಡ ಮುಖ್ಯ ರಸ್ತೆಗೆ ಹೋಗಲು ನಾನು 3 ಪೂಟ್ ಜಾಗವನ್ನು ಬಿಟ್ಟಿರುತ್ತೇನೆ.

ನಿ.ಪಿ.10 ರಲ್ಲಿ ಕಟ್ಟಿರುವ ಹೊಸ ಮನೆ ಇರುವ ಜಾಗ ಮೊದಲು ಗದ್ದೆ ಜಾಗ ಆಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಜಾಗವನ್ನು ನಾನು ಖರೀದಿಸಿದ ನಂತರ ಮಣ್ಣು ತುಂಬಿ ಎತ್ತರ ಮಾಡಿ ತೋಟವನ್ನು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಜಾಗವನ್ನು ಖರೀದಿ ಮಾಡುವ ಸಮಯದಲ್ಲಿ ಗದ್ದೆಯು ಪಂಚಾಯತ್ ರಸ್ತೆಯಿಂದ 2 ಪೂಟ್ ಆಳ ಇತ್ತು. ನಾನು ಜಾಗ ಖರೀದಿಸಿದ ನಂತರ ನಾನು ಗದ್ದೆಯನ್ನು ಮಾಡಿರುವುದಿಲ್ಲ. ಸಾಮಾನ್ಯವಾಗಿ ಬೇಸಾಯ ಮಾಡುವವರು ನೀರು ಹೋಗಲು ಜಾಗವನ್ನು ಬಿಟ್ಟಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ನೀರು ಹೋಗಲು ಒಂದುವರೆ ಪೂಟ್ ಜಾಗವನ್ನು ಬಿಟ್ಟು ಪಾಗಾರವನ್ನು ಹಾಕಿರುತ್ತೇನೆ. ಸಾಕ್ಷಿಗೆ ನಿ.ಪಿ.10 ನ್ನು ತೋರಿಸಿ ಅದರಲ್ಲಿ ಗಟಾರ ಕಾಣುತ್ತಿದೆಯಾ ಎಂದರೆ ಅದನ್ನು ಮಣ್ಣು ತುಂಬಿ ಮುಚ್ಚಿರುತ್ತಾರೆ ಎನುತ್ತಾರೆ. ಮಣ್ಣು ತುಂಬಿ ಮುಚ್ಚಿರುವ ಬಗ್ಗೆ ತೋರಿಸಲು ಪೋಟೊ ತೆಗೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ತೊಂದರೆ ಇರಲಿಲ್ಲ ಎನ್ನುತ್ತಾರೆ.

ನನ್ನ ಮನೆಯ ಪೂರ್ವ ದಿಕ್ಕಿಗೆ ವಿಧ್ಯುತ್ ಟ್ರಾನ್ಸಫಾರ್ಮರ್ ಇದೆ ಎಂದರೆ ಸರಿ. ಸದರಿ ವಿಧ್ಯುತ್ ಟ್ರಾನ್ಸಫಾರ್ಮರನಿಂದ ಜಾನುವಾರುಗಳಿಗೆ ಮತ್ತು ಓಡಾಡುವ ಜನರಿಗೆ ವಿಧ್ಯುತ್ ಶಾಕ್ ಹೊಡೆದ ಬಗ್ಗೆ ದಿನಪತ್ರಿಕೆಯಲ್ಲಿ ಪ್ರಕಟಣೆ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ಥಳದ ದಕ್ಷಿಣ ದಿಕ್ಕಿನಲ್ಲಿ ಇರುವ ಹೊಸ ಮನೆಯ ಕಡೆಯಿಂದ ಹರಿದು ಬರುವ ನೀರು ಮುಖ್ಯ ರಸ್ತೆಗೆ ಬರುತ್ತಿತ್ತು ಎಂದರೆ ಸರಿಯಲ್ಲ. ನಾನು ನೀರು ಹೋಗುವ ಜಾಗವನ್ನು ಬಂದ್ ಮಾಡಿ ಪ್ರತಿವಾದಿಯರ ವಿರುದ್ಧ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿರುವ ಪರಿಹಾರವನ್ನು ಪಡೆಯಲು ನಾನು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರ ವಿರುದ್ಧ ದ್ವೇಷದಿಂದ ಈ ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ 3 ಮತ್ತು 4 ನೇ ಪ್ರತಿವಾದಿಯರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ